<u>ಇಂದು ದಿಃ **25-02-2021** ರಂದು ಮುಕ್ತ ನ್ಯಾಯಾಲಯದಲ್ಲಿ ಹಾಜರಿದ್ದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

**ಪಾಟೀಸವಾಲು ಆರೋಪಿ ಪರಃಶ್ರೀ ಆರ್.ಜಿ.ಬಿ. ವಕೀಲರಿಂದಃ**

ಶ್ರೀನಿವಾಸ್ ರೈಸ್ ಮಿಲ್ ಗೆ ನಾಗೇಶ್ವರ ರಾವ್ ಮಾಲೀಕರು ಎನ್ನುವುದು ನಿಜ. ನಾವು ಬೆಳೆದಂತಹ ಬತ್ತವನ್ನು ನಾವೇ ಶ್ರೀನಿವಾಸ್ ರೈಸ್ ಮಿಲ್ ಗೆ ಹೋಗಿ ಅನ್ ಲೋಡ್ ಮಾಡಿರುತ್ತೇವೆ ಎನ್ನುವುದು ನಿಜ. ಆರೋಪಿ ಖರೀದಿ ಮಾಡಿರುತ್ತಾನೆ ಎನ್ನುವುದಕ್ಕೆ ಖರೀದಿ ಬಿಲ್ಲನ್ನು ಹಾಜರುಪಡಿಸಿಲ್ಲ. ಆರೋಪಿ ಸುಮಾರು ವರ್ಷಗಳಿಂದ ನಂದಿತಾವರೆ ಗ್ರಾಮದಲ್ಲಿ ವಾಸ ಇರುತ್ತಾನೆ ಎನ್ನುವುದು ನಿಜ. ಪೋಲೀಸರು ನನ್ನ ಸಮಕ್ಷಮ ಯಾವುದೇ ಹೇಳಿಕೆಯನ್ನು ತೆಗೆದುಕೊಂಡಿಲ್ಲ. ರೈತ ಸಂಘದ ಅಧ್ಯಕ್ಷರಾದ ಓಂಕಾರಪ್ಪ ಕರೆದುಕೊಂಡು ಹೋಗಿದ್ದು ನನಗೆ ಏನೂ ಗೊತ್ತಿಲ್ಲ ಎನ್ನುವುದು ನಿಜ. ನಮ್ಮ ಬತ್ತವನ್ನು ಆರೋಪಿ ಖರೀದಿ ಮಾಡಿಲ್ಲ ಎನ್ನುವುದು ನಿಜ. ಆರೋಪಿ ನಮ್ಮಿಂದ ಯಾವುದೇ ಬತ್ತ ಖರೀದಿ ಮಾಡದೇ ಇದ್ದರೂ ಸಹ ನನ್ನ ಮುಖ್ಯ ವಿಚಾರಣೆಯಲ್ಲಿ ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾ . ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೆ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.